**ದಿನಾಂಕ 04.06.2026** **ಸಿಸಿ 1520/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ-1**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ.**

ನಾನು ಬಿರ್ಲಾ ಕಂಪನಿಯ ನಿವೃತ್ತ ನೌಕರ ಎಂದರೆ ಸರಿ. ನಾನು 10 ವರ್ಷಗಳ ಹಿಂದೆ ನಿವೃತ್ತಿ ಹೊಂದಿದ್ದೇನೆ. ಆರೋಪಿ ಇಂದಿಗೂ ಸದರಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಆತನ ತಿಂಗಳ ವೇತನ 45-50 ಸಾವಿರ ಎಂದರೆ ಸರಿ. ಆತನ ತಿಂಗಳ ವೇತನ ಇದ್ದುದ್ದರಿಂದ ನನ್ನ ಬಳಿ ಹಣವನ್ನು ಕೇಳುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ.

ನಿಪಿ 1 ನಾನ್ ಸಿಟಿಎಸ್ ಚೆಕ್ ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ರ ತಹರದ ಚೆಕ್ ಗಳನ್ನು ಆರ್ ಬಿ ಐ ರವರು ಮಾರ್ಚ್ 2018 ರಲ್ಲಿ ಎಲ್ಲಾ ಖಾತೆದಾರರಿಂದ ವಾಪಸ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ನಿಪಿ 1 ಚೆಕ್ ಕಾನೂನಿನಡಿಯಲ್ಲಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಆರೋಪಿ ತಾನು ಪಡೆದ 50 ಸಾವಿರ ರೂ.ಗಳನ್ನು ಫೋನ್ ಪೇ ಮೂಲಕ ಹಿಂತಿರುಗಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ 1 ರ ಹಣದ ಬಾಬ್ತು ನನಗೆ ಫೋನ್ ಪೇ ಮೂಲಕ ಹಿಂತಿರುಗಿಸಿಲ್ಲ ಎಂದು ನುಡಿಯುತ್ತಾರೆ. ಆರೋಪಿ 50 ಸಾವಿರ ಹಣವನ್ನು ನನ್ನಿಂದ ಪಡೆದಿದ್ದಕ್ಕೆ ಅದರ ಭದ್ರತೆಗಾಗಿ ನಿಪಿ 1 ನ್ನು ಕೊಟ್ಟಿದಾದರೆ ಎಂದರೆ ಸರಿಯಲ್ಲ. ಆ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಆರೋಪಿಯಿಂದ ಹೆಚ್ಚಿನ ಲಾಭ ಪಡೆಯಲು ಈ ಸುಳ್ಳು ಪ್ರಕರಣವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದು, ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ